ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 6, May-June, 2024, Pp. 97-103
©*IIMRD*, Mysuru

IIMRD JOURNALS
www.iimrd.com

# ವಿಶ್ವ ಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಯಲ್ಲಿ ಭಾರತದ ಪಾತ್ರ: ಒಂದು ಅಧ್ಯಯನ

**ಮಂಜುನಾಥ ಸ್ವಾಮಿ ಎಸ್. ಎಂ**
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜಪೇಟೆ, ಮಂಡ್ಯ.

**ಸಾರಾಂಶ: (Abstract)**

*ಬಾಹ್ಯ ಆಕ್ರಮಣದ ವಿರುದ್ಧ ದೇಶವನ್ನು ಸಂರಕ್ಷಿಸುವುದು ಮತ್ತು ರಾಷ್ಟ್ರದ ಭದ್ರತೆಗೆ ಅಪಾಯ ಬಂದಾಗ ರಕ್ಷಿಸುವುದು, ಸಶಸ್ತ್ರ ಪಡೆಗಳ ಮೂಲ ಪಾತ್ರವಾಗಿದೆ. ಈ ಕಾರ್ಯಗಳನ್ನು ನಿರ್ವಹಿಸುವುದರ ಹೊರತಾಗಿ, ಭಾರತದ ಸಶಸ್ತ್ರ ಪಡೆಗಳು ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿವೆ. ವಿಶ್ವಸಂಸ್ಥೆಯ ಶಾಂತಿಪಾಲನೆಯ ಪ್ರಾಥಮಿಕ ಉದ್ದೇಶವು ಶಾಂತಿ ಮತ್ತು ಭದ್ರತೆಯನ್ನು ಸುಗಮಗೊಳಿಸುವುದು. ನಾಗರಿಕರನ್ನು ರಕ್ಷಿಸುವುದು ಮತ್ತು ಸ್ಥಿರವಾದ ಆಡಳಿತ ರಚನೆಗಳ ಮರು ಸ್ಥಾಪನೆಯನ್ನು ಬೆಂಬಲಿಸುವುದು, ಈ ಕೆಲಸದಲ್ಲಿ ಭಾರತದ ಸಕ್ರೀಯವಾಗಿ ತೊಡಗಿಸಿಕೊಂಡಿದೆ. ವಿಶ್ವಸಂಸ್ಥೆಯ ಶಾಂತಿಪಾಲನೆಗೆ 119 ದೇಶಗಳು ಮಿಲಿಟರಿ ಮತ್ತು ಪೋಲಿಸ್ ಸಿಬ್ಬಂದಿಯನ್ನು ಕೊಡುಗೆಯಾಗಿ ನೀಡಿವೆ, ಈ ಕೊಡುಗೆಗಳಲ್ಲಿ ಭಾರತದ ಪಾತ್ರವೂಕೂಡ ಮಹತ್ವವನ್ನು ಪಡೆದುಕೊಂಡಿದೆ.*

**ಮುಖ್ಯಪದಗಳು (Keywords):** ಶಾಂತಿಪಾಲನಾ ಕಾರ್ಯಚರಣೆ, ಮಧ್ಯಸ್ಥಿಕೆ, ಭಾರತದ ಪಾಲ್ಗೊಳ್ಳುವಿಕೆ, ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆ, ಮೇಲ್ವಿಚಾರಣೆ, ಅಂತರ್ ಕೆಲಸ.

## ಪೀಠಿಕೆ

ಭಾರತವು ವಿಶ್ವಸಂಸ್ಥೆಯ ಶಾಂತಿಪಾಲನೆಯಲ್ಲಿನ ಸೇವೆಯು ಸುದೀರ್ಘ ಇತಿಹಾಸವನ್ನು ಹೊಂದಿದೆ ಯಾವುದೇ ದೇಶಕ್ಕಿಂತ ಹೆಚ್ಚಿನ ಸಿಬ್ಬಂದಿಯನ್ನು ಕೊಡುಗೆಯಾಗಿ ನೀಡಿದೆ. ಭಾರತವು ವಿಶ್ವಸಂಸ್ಥೆಯ ಮಿಷನ್‌ಗಳಿಗೆ ಪ್ರಖ್ಯಾತ ಪೋಲಿಸ್ ಕಮಾಂಡ್‌ಗಳನ್ನು ಸಹ ಒದಗಿಸಿದೆ, ಸಶಸ್ತ್ರ ಪಡೆಗಳ ಕೊಡುಗೆಯಲ್ಲಿ ಬಾಂಗ್ಲಾದೇಶ, ನೇಪಾಳದ ನಂತರ ಭಾರತ ಮೂರನೇ ಸ್ಥಾನದಲ್ಲಿದೆ. ಭಾರತವು 1950ರಲ್ಲಿ ಕೊರಿಯಾದಲ್ಲಿ ತನ್ನ ಮೊದಲ ಬದ್ಧತೆಯ ನಂತರ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ.ಭಾರತೀಯ ಪಡೆಗಳು 72 ವಿಶ್ವಸಂಸ್ಥೆಯ ಕಾರ್ಯಚರಣೆಗಳಲ್ಲಿ 49ರಲ್ಲಿ ಸೇವೆಸಲ್ಲಿಸಿವೆ, ಮಿಲಿಟರಿ ಕೊಡುಗೆಗಳ ಜೊತೆಗೆ ಭಾತರವು ಸಂಘರ್ಷ–ಪೀಡಿತ ಪ್ರದೇಶಗಳಲ್ಲಿ ವೈದ್ಯಕೀಯ ನೇರವು ಮತ್ತು ವಿಪತ್ತು–ಪರಿಹಾರ ಬೆಂಬಲ ಸೇರಿದಂತೆ ಮಾನವೀಯ ನೆರವು ನೀಡುತ್ತಾ ಬಂದಿದೆ.

*Please cite this article as: ಮಂಜುನಾಥ ಸ್ವಾಮಿ. ಎಸ್. ಎಂ.* (2024). ವಿಶ್ವ ಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಯಲ್ಲಿ ಭಾರತದ ಪಾತ್ರ: ಒಂದು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(6). ಪು.ಸಂ.* 97–103

ಭಾರತೀಯ ಅಧಿಕಾರಿಗಳು ವಿಶ್ವಸಂಸ್ಥೆಯ ಮಿಷನ್‌ಗಳಲ್ಲಿ ನಾಯಕತ್ವದ ಪಾತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಪೋಲಿಸ್ ಕಮಾಂಡ್‌ರಗಳು ಸೇರಿದಂತೆ ಪರಿಣಾಮಕಾರಿ ಮಿಷನ್ ನಿರ್ವಹಣೆಗೆ ಕೊಡುಗೆ ನೀಡುತ್ತಾರೆ. ಸಂಘರ್ಷ ಪೀಡಿತ ಪ್ರದೇಶಗಳಲ್ಲಿ ವೈದ್ಯಕೀಯ ಆರೈಕೆ ಮತ್ತು ಮೂಲ ಸೌಕರ್ಯ ಅಭಿವೃದ್ಧಿಯಂತಹ ಅಗತ್ಯ ಸೇವೆಗಳನ್ನು ಒದಗಿಸಲು ಭಾರತವು ವೈದ್ಯಕೀಯ ತಂಡಗಳು ಮತ್ತು ಎಂಜಿನಿಯರಿಂಗ್ ಘಟಕಗಳನ್ನು ನಿಯೋಜಿಸುತ್ತದೆ. ವಿಶ್ವಸಂಸ್ಥೆಯ ಚಾರ್ಟ್‌ರ್ ಅಧ್ಯಾಯರಲ್ಲಿ ವಿವರಿಸಿದಂತೆ ವಿವಿಧ ಕಾರ್ಯ ವಿಧಾನಗಳು ಮತ್ತು ಕ್ರಮಗಳ ಮೂಲಕ ಅಂತರರಾಷ್ಟ್ರೀಯ ಭದ್ರತೆಯನ್ನು ನಿರ್ವಹಿಸುತ್ತದೆ.

**ಅಧ್ಯಯನದ ಉದ್ದೇಶ**

- ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಗಳಲ್ಲಿ ಭಾರತದ ಪಾತ್ರವನ್ನು ವಿವರಿಸುವುದು.
- ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಗಳಲ್ಲಿ ಭಾರತದ ಕೊಡುಗೆಯನ್ನು ಅಧ್ಯಯನ ಮಾಡುವುದು.

**ಸಂಶೋಧನಾ ವಿಧಾನ**

ಈ ಲೇಖನವು ವಿವರಣಾತ್ಮಕ ಮತ್ತು ವಿಶ್ಲೇಷಣಾ ವಿಧಾನವನ್ನು ಒಳಗೊಂಡಿದೆ ಅಗತ್ಯಕ್ಕೆ ಅನುಗುಣವಾಗಿ ದ್ವಿತೀಯ ಮಾಹಿತಿಯ ಸಂಗ್ರಹಣೆಯ ಮಾಡಲಾಗಿದೆ, ಜೊತೆಗೆ ಅಂತರ್ಜಾಲದ ಮಾಹಿತಿಯನ್ನು ಪಡೆಯಲಾಗಿದೆ.

ವಿಶ್ವಸಂಸ್ಥೆಯ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿ ವಿಶ್ವಕ್ರಮವನ್ನು ಬಲಪಡಿಸುವುದು ಮತ್ತು ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗಾಗಿ ಕಾರ್ಯಮಾಡುವುದು ಭಾರತದ ಆದರ್ಶವಾಗಿದೆ. 1950ರ ಕೊರಿಯಾದಲ್ಲಿ ಭಾರತದ ಮೊದಲ ಬದ್ದತೆಯ ನಂತರ ಸಂಕೀರ್ಣವಾದ ನಿರ್ವಹಿಸಲಾದ ಶಾಂತಿ ಕಾರ್ಯಚರಣೆಗಳನ್ನು ಭಾರತೀಯ ಪಡೆಗಳು ಮೇಲ್ವಿಚಾರಣೆ ಮಾಡಿವೆ, ವೃತ್ತಿಪರವಾದ ಶ್ರೇಷ್ಠತೆಗೆ ಸಾರ್ವಜನಿಕವಾದ ಮೆಚ್ಚುಗೆಯನ್ನು ಗಳಿಸಿದೆ. ಭಾರತದ ಭಾಗವಹಿಸುವಿಕೆಯು ರಾಷ್ಟ್ರೀಯ ಭದ್ರತಾ ಕಾರ್ಯತಂತ್ರ ಮತ್ತು ವಿಶ್ವಕ್ರಮದ ಆಸಕ್ತಿಗಳನ್ನು ಪೂರೈಸಿದೆ ಪ್ರಸ್ತುತ ದಿನಗಳಲ್ಲಿ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಗಳಲ್ಲಿ ಭಾರತದ ಪಾತ್ರವನ್ನು ಪರಿಶೀಲಿಸುವುದು ಮುಖ್ಯವಾಗಿರುತ್ತದೆ,

**ವಿಶ್ವ ಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಗಳಲ್ಲಿ ಭಾರತದ ಭಾಗವಹಿಸುವಿಕೆ**

ಭಾರತೀಯ ಸೆನೆಯು ಅತ್ಯುತ್ತಮ ಪೋಲಿಸ್ ಕಮಾಂಡರ್‌ಗಳು, ಸೇನಾ ತುಕಡಿಗಳು, ಮಿಲಿಟರಿ ವೀಕ್ಷಕರು ಮತ್ತು ಬದ್ಧತೆಯುಳ್ಳ ಸಿಬ್ಬಂದಿ ಅಧಿಕಾರಿಗಳನ್ನು ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಗಳಿಗೆ ಕೊಡುಗೆಯಾಗಿ ನೀಡಿದೆ. 173 ಭಾರತೀಯ ಅಧಿಕಾರಿಗಳು, ಸೈನಿಕರು ಮತ್ತು ಇತರ ಸಿಬ್ಬಂದಿಗಳು ಕಾರ್ಯಚರಣೆಯಲ್ಲಿ ಸೇವೆ ಸಲ್ಲಿಸುವಾಗ ತಮ್ಮ ಪ್ರಾಣವನ್ನು ಅರ್ಪಿಸಿದ್ದಾರೆ.

ಪ್ರಸ್ತುತ ಭಾರತದಿಂದ 8500 ಪಡೆಗಳು ಪೋಲಿಸರ್ ಮತ್ತು ನಾಗರೀಕ ಸೇವಾ ಸಿಬ್ಬಂದಿಯನ್ನು ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಗಳಲ್ಲಿ ನಿಯೋಜಿಸಲಾಗಿದೆ ಏಷ್ಯ ಮತ್ತು ಆಫ್ರಿಕಾದಲ್ಲಿ ಶಾಂತಿ

ಮತ್ತು ಸ್ಥಿರತೆಗೆ ಅತ್ಯಂತ ಮಹತ್ವದ ಕೊಡುಗೆಯನ್ನು ನೀಡಲಾಗಿದೆ. 1960ರ ಸಂದರ್ಭದಲ್ಲಿ ಕಾಂಗೋದಲ್ಲಿ ನಡೆದ ವಿಶ್ವಸಂಸ್ಥೆಯ ಇತಿಹಾಸದಲ್ಲಿ ಮೊದಲ ಶಾಂತಿಯ 40 ಕಾರ್ಯಚರಣೆಯಾಯಿತು ಪಶ್ಚಿಮ ಏಷ್ಯದಲ್ಲಿ ಶಾಂತಿಪಾಲನೆಗೆ ಭಾರತವು ತುಂಬಾಕೊಡುಗೆ ನೀಡಿದ ಇದರ ಏಳು ಶಾಂತಿ ಪಾಲನಾ ಕಾರ್ಯಚರಣೆಗಳಲ್ಲಿ ಸೇವೆ ಸಲ್ಲಿಸಿದ. ಏಪ್ರಿಲ್ 2009ರಲ್ಲಿ ಭಾರತವು ಲೆಕ್ಕಚಾರದಲ್ಲಿ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಗೆ ಸಂಪೂರ್ಣ ಮಹಿಳಾ ತುಕಡಿಯನ್ನು ನಿಯೋಜಿಸಿದೆ. ಭಾರತ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದರ ಮೂಲಕ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಗೆ ಮಹಿಳೆಯರನ್ನು ಕಳುಹಿಸುವ ನಿಯೋಜಿಸುವ ಸುದೀರ್ಘವಾದ ಸಂಪ್ರದಾಯವನ್ನು ಭಾರತ ಹೊಂದಿದೆ. ವಿಶ್ವ ಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಗಳಲ್ಲಿ ಭಾರತದ ಪಾಲ್ಗೋಳುವಿಕೆ ಕೋರಿಯಾ ಯುದ್ಧದಿಂದ ಪ್ರಾರಂಭವಾಯಿತು. 16 ದೇಶಗಳ ಪಡೆಗಳು ಜನರಲ್‌ಡಾಗ್ಲಾಸ್ ಮ್ಯಾಕ್‌ಆರ್ಥರ್‌ರವರ ಅಡಿಯಲ್ಲಿ ವಿಶ್ವಸಂಸ್ಥೆಯ ಬಹುರಾಷ್ಟ್ರೀಯ ಪಡೆ MNF (ಮಲ್ಟಿನ್ಯಾಷನಲ್ ಪೋರ್ಸ್)ಅನ್ನು ರಚಿಸಿದವು ನವೆಂಬರ್ 1950, ಜುಲೈ 1954 ರವರೆಗೆ ಭಾರತವು MNFಗೆ 60 ಪ್ಯಾರಾ ಪೀಲ್ಡ್‌ಆಂಬ್ಯುಲೆನ್ಸ್‌ಅನ್ನು ಕೊಡುಗೆಯಾಗಿ ನೀಡಿತು. ವಿಶ್ವಸಂಸ್ಥೆ ಕೊರಿಯಾದಲ್ಲಿ NNRCಅನ್ನು 1953ರಲ್ಲಿ ಸ್ಥಾಪನೆಮಾಡಿತು. ಸೆರೆಹಿಡಿದಯುದ್ಧ ಕೈದಿಗಳ ಸಮಸ್ಯೆಗಳನ್ನು ಬಗೆಹರಿಸಲು ಸ್ಥಾಪನೆ ಮಾಡಲಾಯಿತು. ಪೋಲಿಸ್ ಜಕೋಸ್ಲೊವಾಕಿಯಾ, ಸ್ವಡನ್ ಮತ್ತು ಸ್ವಿಡ್ಜ್‌ಲ್ಯಾಂಡ್‌ನ ಸದಸ್ಯರೊಂದಿಗೆ ಲೆಫ್ಟಿನೆಂಟ್‌ಜನರಲ್ ಕೆ.ಎಸ್‌ತಿಮ್ಮಯ್ಯ ಅವರನ್ನು NNRCಯ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. SSP- ಅಡಿಯಲ್ಲಿ ಭಾರತವು ಕಸ್ಟೋಡಿಯನ್ ಪೋರ್ಸ್‌ಅನ್ನು ಒದಗಸಿತು. ಇದುಉತ್ತಮ ಸೇವೆಯನ್ನು ಸಲ್ಲಿಸಿತು ಭಾರತದ ನಿಷ್ಪಕ್ಷಪಾತ ಮತ್ತು ರಚನಾತ್ಮಕ ಪಾತ್ರವನ್ನು ವ್ಯಾಪಕವಾಗಿ ಜಗತ್ತಿನೆಲ್ಲೆಡೆ ಪ್ರಶಂಸಿಸಲಾಯಿತು. ಜಿನೀವಾ ಒಪ್ಪಂದದ ಅನುಸಾರವಾಗಿ 1954ರಲ್ಲಿ ಇಂಡೋಚೈನಕ್ಕಾಗಿ ICC ಅನ್ನು (ಇಂಟರ್ ನ್ಯಾಷನಲ್ ಕಂಟ್ರೋಲ್ ಕಮಿಷನ್) ಸ್ಥಾಪನೆ ಮಾಡಲಾಯಿತು.

ಯು.ಎಸ್.ಇ.ಎಫ್‌ನಲ್ಲಿ ಭಾರತೀಯ ಕೊಡುಗೆಯು ವಿಶ್ವಸಂಸ್ಥೆಯ ಪಡೆಗಳ ಬಹುಪಾಲು ಭಾಗವನ್ನು ಹೊಂದಿದೆ ಯುಎಸಿಎಫ್–ಗಾಜಾಪಟ್ಟಿ/ಈಜಿಪ್ಟ್ ಮತ್ತು ಇಸ್ರೇಲ್ ಇಲ್ಲಿ ಮೊದಲ ಬಾರಿಗೆ ಸಶಸ್ತ್ರ ಪಡೆಗಳ ತುಕಡಿಗಳನ್ನು ನಿಯೋಜಿಸಲಾಯಿತು. ಮೇಜರ್‌ಜನರಲ್ ಪಿ.ಎಸ್.ಗ್ಯಾನಿ ಮತ್ತು ಬ್ರಿಗೇಡಿಯರ್, ಇಂದರ್‌ಜಿತ್‌ರಿಬೆ ಈ ಕಾರ್ಯಚರಣೆಯ ಪೋರ್ಸ್ ಕಮಾಂಡರ್‌ಗಳಾಗಿದ್ದರು ಇದು ನಂತರದ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಗಳಿಗೆ ಮಾದರಿಯಾಯಿತು.

ಕಾಂಗೋದಲ್ಲಿ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಗಳು ಜೂನ್ 1960, ಜೂನ್ 1964ರವರೆಗೆ ಭಾರತದ ಪಾತ್ರ ತುಂಬಾ ಗಮನಾರ್ಹವಾದುದಾಗಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿ 1960ರಲ್ಲಿ ಹೊಸದಾಗಿ ಸ್ವತಂತ್ರವಾದ ಕಾಂಗೋ ಗಣರಾಜ್ಯದ ಸರ್ಕಾರವು ಮಧ್ಯ ಪ್ರವೇಶಿಸುವಂತೆ, ಮಾಡಿದ ವಿನಂತಿಯನ್ನು ಸುಲಭವಾಗಿ ಸ್ವೀಕರಿಸಲು ಕಾರಣವಾಯಿತು. ಕಾಂಗೋದಲ್ಲಿ ಸ್ಥಾಪಿಸಲಾದ ONUC- ಹಲವು ವಿಧಗಳಲ್ಲಿ ವಿಶಿಷ್ಟವಾಗಿದೆ ವಿಶ್ವಸಂಸ್ಥೆ ಮೊದಲ ಬಾರಿಗೆ ಕಾರ್ಯಚರಣೆಯನ್ನು ಕೈಗೊಂಡಿತು. ಅಲ್ಲಿ

ಅಂತರ್‌ದೇಶದ ಯುದ್ಧದ ಬದಲಿಗೆ ದೇಶದೊಳಗಿನ ಕಲಹವನ್ನು ತಡೆಗಟ್ಟುವ ಕಾರ್ಯವಾಗಿತ್ತು. ONUC ಗೆ ಭಾರತೀಯ ಶಸಸ್ತ್ರಪಡೆಗಳ ಕೊಡುಗೆಯು ಎರಡು ಪದ್ದತಿಗಳನ್ನು ಒಳಗೊಂಡಿತ್ತು. ಜೊತೆಗೆ ಭಾರತೀಯ ವಾಯು ಪಡೆಯತುಕಡಿಯನ್ನು ಕಟಾಂಗದಲ್ಲಿ ನಿಯೋಜಿಸಲಾಗಿತ್ತು. ಕಾರ್ಯಚರಣೆಯ ಸಂದರ್ಭದಲ್ಲಿ ಮೇಜರ್‌ಜನರಲ್ ದಿವಾನ್ ಪ್ರೇಮ್‌ಚಂದ್ ಅವರು ಹೆಡ್‌ಕ್ವಾರ್ಟರ್ಸ್ ಕಟಾಂಗಾ ಏರಿಯಾಗೆ ಕಮಾಂಡರ್ ಆಗಿದ್ದರು ಡಿಸೆಂಬರ್ 31. 1961ರಂದು ಕಟಾಂಗಾ ಏರಿಯಾದಲ್ಲಿ ಕಾರ್ಯಚರಣೆಯನ್ನು ಪ್ರಾರಂಭಿಸಿದಾಗ ಕಾಂಗೋದಲ್ಲಿನ ಭಾರತೀಯ ಸೇನೆಯ ಕಾರ್ಯಚರಣೆಯು ವಿಶ್ವಸಂಸ್ಥೆಯ ಇತಿಹಾಸದಲ್ಲಿ ಮೊದಲ ಶಾಂತಿ ಜಾರಿ ಕಾರ್ಯಚರಣೆಯಾಯಿತು ಮತ್ತು ಒಡೆದು ಹೋದ ಬಣ ಕಾರಾಂಗೀಸ್ ಜೆಂಡರ್ಮರಿ ನೇತೃತ್ವದ ತೀವ್ರ ಪ್ರತಿರೋಧದ ನಡುವೆಯೇ ಸಂಪೂರ್ಣ ನಿಯಂತ್ರಣವನ್ನು ಮರಳಿ ಪಡೆಯಿತು.

ಮೇಜರ್‌ಜನರಲ್ ದಿವಾನ್ ಪ್ರೇಮ್‌ಚಂದ್ ಮತ್ತು ಆರ್.ಎಸ್.ನೊರೂನಾ ಅವರು ಕೋಲೆಜಿಯ ಪ್ರಮುಖ ಪಟ್ಟಣಕ್ಕೆ ಭಾರತೀಯ ಬ್ರಿಗ್ರೇಡ್‌ನ ತ್ವರಿತ ಮುನ್ನಡೆಯನ್ನು ಖಚಿತಪಡಿಸಿದರು, ಇದು ಬಂಡುಕೋರರನ್ನು ಬೆಚ್ಚಿಬೀಳಿಸಿತು. ಭಾರತೀಯ ಆಕ್ರಮಣದ ಮುಖಾಂತರ ಹತಾಶೆಗೊಂಡಿತು, ಮತ್ತು ತಮ್ಮ ಶಸಸ್ತ್ರಗಳನ್ನು ತ್ಯಜಿಸಿತು ಇದರ ಪರಿಣಾಮವಾಗಿ ಕಾಂಗೋ ಏಕೀಕರಣವಾಯಿತು. ಈ ಕಾರ್ಯ ಚರಣೆಯಲ್ಲಿ 36 ಭಾರತೀಯರು ಸಾವನ್ನಪ್ಪಿದರು 124 ಮಂದಿ ಗಾಯಗೊಂಡರು. ಕ್ಯಾಪ್ಟನ್ ಜಿ.ಎಸ್.ಸಲಾರಿಯಾ ಅವರಿಗೆ ಮರಣೋತ್ತರವಾಗಿ ಪರಮವೀರ ಚಕ್ರವನ್ನು ನೀಡಲಾಯಿತು. ನಮೀಬಿಯಾದಲ್ಲಿ ವಿಶ್ವಸಂಸ್ಥೆಯ ನೇರವು 1989ಮೇ ಯಿಂದ 1991ಮೇ ವರೆಗೆಇದರಲ್ಲಿ ಭಾರತದ ಪಾತ್ರವನ್ನು ಉಲ್ಲೇಖ ಮಾಡುವುದಾದರೆ ಭಾರತೀಯ ಸೇನಾ ವೀಕ್ಷಕರು ಪೋಲಿಸ್ ಪರಿವೀಕ್ಷಕರು ಮತ್ತು ಚುನಾವಣಾ ಮೇಲ್ವಿಚಾರಕರು ವಿಶ್ವಸಂಸ್ತೆಯ ಪರಿವರ್ತನಾ ಸಹಾಯ ಗುಂಪಿನ ಭಾಗವಾಗಿ ರಚಿಸಿದರು ಇದು ವಿದೇಶಿ ಪಡೆಗಳ ವಾಪಸಾತಿ ಚುನಾವಣೆಗಳ ನಡವಳಿಕೆ ಮತ್ತು ನಂತರದ ಹಸ್ತಾಂತರವನ್ನು ಮೇಲ್ವಿಚಾರಣೆ ಮಾಡುತ್ತದೆ. ಲೆಫ್ಟಿನೆಂಟ್ ಜನರಲ್ ದಿವಾನ್ ಚಂದ್ ಅವರು ಈ ಕಾರ್ಯ ಚರಣೆಯಲ್ಲಿ ಪೋರ್ಸ್‌ಕಮಾಂಡರ್ ಎಂದು ಗುರುತಿಸಿಕೊಂಡರು. ವಿಶ್ವ ಸಂಸ್ಥೆಯ ಇತರೆ ಕಾರ್ಯ ಚರಣೆಗಳಲ್ಲಿ ಭಾರತದ ಪಾಲ್ಗೋಳುವಿಕೆ ಭಾರತೀಯ ಸೇನೆಯ ಪೋರ್ಸ್‌ಕಮಾಂಡರ್ ಲೆಫ್ಟಿನೆಂಟ್ ಜನರಲ್ ಪಿ.ಎಸ್,ಗ್ಯಾನಿ ಮತ್ತು 1963–64ರಲ್ಲಿ UNYOM(ಯುನೈಟೆಡ್ ನೇಷನ್ ಯಮನ್ ಅಬ್ಲವೇಶನ್ ಮಿಷನ್) ಗಾಗಿ ಮಿಲಿಟರಿ ವೀಕ್ಷಕರಾಗಿ ಸೇವೆ ಸಲ್ಲಿಸಿದರು. 1964ರಲ್ಲಿ ಕೈಗೊಂಡ ಸೈಪ್ರಸ್ ಕಾರ್ಯಚರಣೆಯಲ್ಲಿ UNFICYP (ಯುನೈಟೆಡ್ ನೇಷನ್ಸ್ ಪೀಸ್‌ಕೀಪಿಂಗ್ ಪೋರ್ಸ್‌ಇನ್ ಸೈಪ್ರಸ್) ಮೂರು ಭಾರತೀಯ ಪೋರ್ಸ್ ಕಮಾಂಡರ್‌ಗಳನ್ನು ನೇಮಿಸಿತ್ತು.

ಭಾರತವು ಇರಾನ್–ಇರಾಕ್ ಯುನೈಟೆಡ್ ನೇಷನ್ಸ್ ಇರಾನ್–ಇರಾಕ್ ಮಿಲಿಟರಿ ಅಬ್ಸರ್ದರ್ ಗ್ರೊಪ್ ಮತ್ತು ಕುವೈತ್ ಯುನೈಟೆಡ್ ನೇಷನ್ಸ್, ಇರಾಕ್–ಕುವೈತ್ ಅಬ್ಸಿರ್ವೇಶನ್ ಮಿಷನ್‌ನ ವಿಶ್ವಸಂಸ್ಥೆಯ ಕಾರ್ಯಚರಣೆಗಳಿಗೆ ಮಿಲಿಟರಿ ವೀಕ್ಷಕರನ್ನು ಭಾರತ ಕಳುಹಿಸಿದೆ. ಸೋಮಾಲಿಯಾದಲ್ಲಿ ವಿಶ್ವ

ಸಂಸ್ಥೆಯಕಾರ್ಯಚರಣೆ(UNOSOM11) ಮಾರ್ಚ್ 1993–ಡಿಸೆಂಬರ್ 1994 ಭಾರತದ ಪಾತ್ರವನ್ನು ನೋಡುವುದಾದರೆ, ವಿಶ್ವಸಂಸ್ಥೆ ಇದುವರೆಗೆ ಪ್ರಯತ್ನಿಸಿದ ಅತ್ಯಂತ ಕಷ್ಟಕರ ಮತ್ತು ಸಾವಾಲಿನ ಕಾರ್ಯಚರಣೆಗಳಲ್ಲಿ ಒಂದಾಗಿದೆ. ಅದುಯಾವುದೆಂದರೆ ಸೋಮಾಲಿಯಾ ಕಾರ್ಯಚರಣೆ ಆಗಿದೆ. ಭಾರತೀಯ ಸೇನೆಯು ಬ್ರಿಗ್ಮನ್ನೋ ಭಗತ್ ನೇತೃತ್ವದ ಬಿಗೇಡ್ ಗುಂಪನ್ನು ಕೊಡುಗೆಯಾಗಿ ನೀಡಿತು ಭಾರತೀಯ ನೌಕಪಡೆಯ ಹಡಗುಗಳು ಮತ್ತು ಸಿಬ್ಬಂದಿಗಳು ಸೋಮಾಲಿ ಕರಾವಳಿಯಲ್ಲಿ ಗಸ್ತು ಕರ್ತವ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಬಲವಂತದ ನಿಶ್ಯಸ್ತ್ರೀಕರಣ ಮತ್ತು ಮಾನವೀಯ ಪರಿಹಾರದ ಆಗಾಗ್ಗೆ ಸಂಘರ್ಷದ ಪಾತ್ರಗಳನ್ನು ಭಾರತೀಯ ಪಡೆ ಯಶಸ್ವಿಯಾಗಿ ಸಂಯೋಜಿಸಿತು.

ಯುನೈಟೆಡ್ ನೇಷನ್ಸ್ ಅನಿಸ್ಟೆನ್ಸ್ ಮಿಷನ್ ಫಾರ್ರುವಾಂಡಾ ಅನ್ನು ಆಕ್ಟೋಬರ್ 1993ರಲ್ಲಿ ಸ್ಥಾಪಿಸಲಾಯಿತು. ಇಲ್ಲಿ ಭಾರತೀಯ ತುಕಡಿ ಪದಾತಿದಳದ ಬೆಟಾಲಿಯನ್ ಗುಂಪನ್ನು ಒಳಗೊಂಡಿತ್ತು. ಬ್ರಿಗ್‌ಶಿವಕುಮಾರ್ ಪೋರ್ಸ್‌ಕಮಾಂಡರ್ ಆಗಿ ಸೇವೆಸಲ್ಲಿಸಿದ್ದರು. ಕಲಾಳುಪಡೆ ಬೆಟಾಲಿಯಾನ್ ಗುಂಪಿನ ಭಾರತೀಯ ತುಕಡಿಯು ಅಂಗೋಲ ಬಂಡುಕೋರರ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರೀಯ ಒಕ್ಕೂಟವನ್ನು ನಿಶ್ಯಸ್ತ್ರಗೊಳಿಸುವುದು ಮತ್ತು ಜಂಟಿ ರಾಷ್ಟ್ರೀಯ ಸೇನೆಯಾದ ಅಂಗೋಲಾದ ಸಶಸ್ತ್ರ ಪಡೆಗಳ ಪೂರ್ಣಗೊಳಿಸುವಿಕೆಯನ್ನು ಮೇಲ್ವಿಚಾರಣೆ ಮಾಡುವಲ್ಲಿ ಗಮನಾರ್ಹವಾದ ಕೆಲಸವನ್ನು ಮಾಡಿದೆ. ಸಿಯಾರಾ ಲಿಯೋನ್ ನಲ್ಲಿಶಾಂತಿ ಮತ್ತು ಸ್ಥಿರತೆಯನ್ನು ಸ್ಥಾಪಿಸಲು, 1999ರಲ್ಲಿ ಯುನೈಟೆಡ್ ನೇಷನ್ಸ್ ಅವಿಸ್ಟೆನ್ಸ್ ಮಿನಿಯನ್‌ನ್ನು ಸ್ಥಾಪನೆ ಮಾಡಲಾಯಿತು.

ಭಾರತವು ಎರಡು ಬೆಟಾಲಿಯನ್ ಗುಂಪುಗಳು ವೈದ್ಯಕೀಯ ಘಟಕ ಮತ್ತು ಹೆಲಿಕ್ಯಾಪ್ಟರ್ ಘಟಕವನ್ನು ನಿಯೋಜಿಸಲಾಯಿತು. ಯುನೈಟೆಡ್ ನೇಷನ್ಸ್ ಅಪರೇಷನ್ ಇನ್ ಕೋಟ್ ಡಿ ಪಿವೂಯಿರ್ ಪ್ರಾರಂಭವಾದಾಗಿನಿಂದ ಅಂದರೆ 2004–2017ರವರೆಗೆ ಈ ಕಾರ್ಯಚರಣೆಯನ್ನು ನಡೆಸಲಾಯಿತು. ಇದರಲ್ಲಿ ಭಾರತದ ಮಿಲಿಟರಿ ವೀಕ್ಷಕರು ಮತ್ತು ಸಿಬ್ಬಂದಿ ವರ್ಗದವರು ಭಾಗವಹಿಸಿದರು.

ಇಥಿಯೋಪಿಯ ಮತ್ತು ಎರಿಟ್ರಿಯಾದಲ್ಲಿ ಯುನೈಟೆಡ್ನೇಷನ್ಸ್ ಮಿಷನ್‌ನಲ್ಲಿ ಭಾರತದ ಒಂದು ಪದಾತಿದಳದ ಬೆಟಾಲಿಯನ್ ಗುಂಪನ್ನು ಒಳಗೊಂಡಿತ್ತು. ಮೇಜರ್ ಜನರಲ್ ರಾಜಿಂದರ್ ಸಿಂಗ್ ಅವರ ಈ ಕಾರ್ಯಚರಣೆಯ ಪೋರ್ಸ್‌ಕಮಾಂಡರ್ ಆಗಿ ಸೇವೆ ಸಲ್ಲಿಸಿದರು. ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳ 3802 ಪಡೆಗಳು 1948–2018ರ ನಡುವೆ ವಿಶ್ವಸಂಸ್ಥೆ ಯಚಾರ್ಟರ್‌ಅನ್ನು ರಕ್ಷಿಸಲು ತಮ್ಮ ಪ್ರಾಣವನ್ನು ನೀಡಿದ್ದಾರೆ. ಅತಿ ಹೆಚ್ಚು ಭಾರತದವರು ಭಾರತವುತನ್ನ ಶಾಂತಿಪಾಲಕರಿಗೆ ನೆನಪಿನ ವರ್ಚುವಲ್ ಗೋಡೆಯನ್ನು ಪ್ರಾರಂಭಿಸಿದೆ. ವಿಶ್ವಸಂಸ್ಥೆಯ ಜನರಲ್ ಅಸ್ಲೆಂಬಿ ಶಾಂತಿಪಾಲಕರಿಗೆ ಸ್ಮಾರಕವನ್ನು ನಿರ್ಮಿಸಲು ಅನುಮೋದಿಸಿದೆ, ಪ್ರಧಾನಮಂತ್ರಿ ಶ್ರೀ.ನರೇಂದ್ರ ಮೋದಿಯವರು ಹೇಳುವಂತೆ ಪತನಗೊಂಡ ಶಾಂತಿಪಾಲಕರ ಉದ್ದೇಶಿತ ಸ್ಮಾರಕ ಗೋಡೆಯನ್ನು ತ್ವರಿತವಾಗಿ ಸ್ಥಾಪಿಸಿದರೆ ಅದು ಅತ್ಯಂತ ಸೂಕ್ತ ವಾದುದು ಎಂದು ಹೇಳಿದ್ದಾರೆ.

ಭಾರತ ಸರ್ಕಾರವು 2020ರಲ್ಲಿ ವಿಶ್ವಸಂಸ್ಥೆಯ 75ನೇ ವರ್ಷವನ್ನು ಆಚರಿಸಲು ಅಂಚೆ ಚೀಟಿ ಬಿಡುಗಡೆ ಮಾಡಿದೆ. ಕಳೆದ 75ವರ್ಷಗಳಲ್ಲಿ ಭಾರತೀಯ ಪಡೆಗಳು 5ವಿವಿಧ ತಂಡಗಳಲ್ಲಿ ಸೇವೆಸಲ್ಲಿಸಿವೆ.

ಇಂದು ಭಾರತ ಉದಯೋನ್ಮುಖವಾದ ಶಕ್ತಿ ರಾಷ್ಟ್ರವಾಗಿದೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಖಾಯಂ ಸ್ಥಾನವನ್ನು ಬಯಸುತ್ತಿದೆ, ಭಾರತವು ಆಗಸ್ಟ್ 2021ರಿಂದ ವಿಶ್ವ ಸಂಸ್ತೆಯ ಭದ್ರತಾ ಮಂಡಳಿಯ ಅಧ್ಯಕ್ಷಸ್ಥಾನವನ್ನು ಹೊಂದಿದೆ.ಜಾಗತಿಕ ಸನ್ನಿವೇಶದಲ್ಲಿ ಪ್ರಮುಖವಾದ ಪಾತ್ರವನ್ನುವಹಿಸಲು ಬಯಸಿದಲ್ಲಿ ಅದರ ಒಟ್ಟಾರೇ ರಾಷ್ಟ್ರೀಯ ಹಿತಾಶಕ್ತಿಗಳನ್ನು ಗಮನದಲ್ಲಿಟ್ಟು ಕೊಂಡು ವಿಶ್ವ ಸಂಸ್ಥೆಯ ಶಾಂತಿಪಾಲನಾ ಕಾರ್ಯಗಳ ಕಡೆಗೆತನ್ನ ಬದ್ದತೆಯನ್ನು ಪೂರೈಸುವುದು ಕಡ್ಡಾಯವಾಗಿದೆ ಇದು ಭಾರತ ವಹಿಸಬೇಕಾದ ಮುಖ್ಯವಾದ ಪಾತ್ರವಾಗಿದೆ.

**ವಿಶ್ವಸಂಸ್ಥೆಯ ಶಾಂತಿಪಾಲನಾ ಕೇಂದ್ರ**

ಭಾರತವು ವಿಶ್ವಸಂಸ್ಥೆಯ ಅನುಭವಿ ಅಧಿಕಾರಿಗಳ ಸಿಬ್ಬಂದಿಗಳನ್ನು ಹೊಂದಿದೆ ಮಾತ್ರವಲ್ಲದೆ ಎಲ್ಲಾ ರೀತಿಯ ಭೂ ಪ್ರದೇಶಗಳನ್ನು ತರಬೇತಿ ನೀಡಲು ಮತ್ತು ಹೋರಾಡಲು ಸೌಲಭ್ಯಗಳು ಪರಿಣಿತಿಯನ್ನು ಹೊಂದಿದೆ. ನವದೆಹಲಿಯಲ್ಲಿ ಸೆಪ್ಟೆಂಬರ್ 2000ರಲ್ಲಿ ಯುನೈಟೆಡ್ ಸರ್ವಿಸ್ ಇನ್ಸಿಟ್ಯೂಷನ್ಸ್ ಆಫ್ ಇಂಡಿಯಾ ಅಡಿಯಲ್ಲಿ ಸ್ಥಾಪಿಸಲಾದ CUNIK ಭಾರತೀಯ ಶಾಂತಿ ಪಾಲಕರಿಗೆ ಮತ್ತು ಸ್ನೇಹಪರ ವಿದೇಶಗಳಿಂದ ಬಂದವರಿಗೆ ಅತ್ಯತ್ತಮ ಶಾಂತಿಪಾಲನಾ ಸಂಬಂಧಿತ ತರಬೇತಿ ಯನ್ನು ನೀಡುತ್ತದೆ ಕಳೆದ 20ವರ್ಷಗಳಲ್ಲಿ CUNPK ಅಂತರಾಷ್ಟ್ರೀಯ ಮಟ್ಟದಲ್ಲಿ ಉತ್ಕೃಷ್ಟತೆಯ ಕೇಂದ್ರವಾಗಿ ಸ್ಥಾಪಿಸಲ್ಪಟ್ಟಿದೆ.

**ಉಪಸಂಹಾರ**

ರಾಷ್ಟ್ರ ವರ್ಗ ಬುಡಕಟ್ಟು ಮತ್ತು ಜನಾಂಗದ ಗಡಿಗಳನ್ನು ಮೀರಿ ವಿಶ್ವಸಂಸ್ಥೆಯು ವಿಶ್ವಕ್ಕೆ ಸಹಾಯಮಾಡಿದೆ. ವಿಶ್ವಶಾಂತಿಯನ್ನು ಕಾಪಾಡುವಲ್ಲಿ ವಿಶ್ವಸಂಸ್ಥೆಯ ಶಾಂತಿಪಾಲನೆಯ ಅತ್ಯುನ್ನತ ಕಾರ್ಯಚರಣೆಗಳನ್ನು ಕೈಗೊಂಡಿದೆ, ಇದಕ್ಕಾಗಿ 1988ರಲ್ಲಿ ಪ್ರತಿಷ್ಠಿತ ನೋಬಲ್ ಶಾಂತಿ ಪ್ರಶಸ್ತಿಯನ್ನು ಸ್ವೀಕರಿಸುವಂತೆ ಮಾಡಿದೆ. ಇದರಲ್ಲಿ ಭಾರತದ ಪಾತ್ರವು ಕೂಡ ಮುಖ್ಯವಾಗಿದೆ. ವಿಶ್ವಸಂಸ್ಥೆ ಮತ್ತು ಭಾರತದ ಎರಡು ಅಹಿಂಸೆಯ ಮೂಲಕ ಜಾಗತೀಕ ಶಾಂತಿಯನ್ನು ಕಾಪಾಡುವಲ್ಲಿ ದಾಪುಗಾಲನ್ನು ಇಟ್ಟಿಕೊಂಡಿದೆ ವಿಶ್ವಸಂಸ್ತೆಯ ಶಾಂತಿಪಾಲನಾ ಪಡೆಗಳ ಪ್ರಧಾನ ಕೊಡುಗೆದಾರರಲ್ಲಿ ಉಳಿಯುವ ಮೂಲಕ ವಿಶ್ವಸಂಸ್ಥೆಯ ಬಲವರ್ಧನೆಗಳನ್ನು ಬಲಪಡಿಸಿದೆ. ನಮ್ಮ ಸೈನಿಕರು ಅತ್ಯಂತ ದೈಹಿಕವಾಗಿ ಬೇಡಿಕೆಯಿರುವ ಮತ್ತು ಕಠಿಣ ಪರಿಸರದಲ್ಲಿ ಸೇವೆಸಲ್ಲಿಸುವ ಮೂಲಕ ಅತ್ಯುನ್ನತ ಕ್ರಮದ ಸಮರ್ಪಣೆ ಮತ್ತು ನಿರ್ಣಯವನ್ನು ತೋರಿಸಿದ್ದಾರೆ. ಈ ಕಾರ್ಯಕ್ಕೆ ನಮ್ಮ ಪಡೆಗಳಿಗೆ ವಿಶ್ವದ್ಯಾದಂತ ಚಪ್ಪಾಳೆ ಮತ್ತು ಮನ್ನಣೆಯನ್ನು ತಂದಿದೆ. ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಚರಣೆಗಳಲ್ಲಿ ಭಾಗವಹಿಸುವುದು ಭಾರತಕ್ಕೆ ತನ್ನ ತೃತೀಯ ಜಗತ್ತಿನ ರುಜುವಾತುಗಳನ್ನು ಪ್ರದರ್ಶಿಸಲು ನಿರ್ಣಾಯಕ ಮಾರ್ಗವಾಗಿದೆ.

**ಪರಮರ್ಶನಾ ಗ್ರಂಥಗಳು**


- Ministry of Defence. (n.d.). India and the United Nations peacekeeping operations.

- Mukerji, A. (n.d.). United Nations peacekeeping: India’s contributions. Ambassador Creeds.
- Nambiar, S. (n.d.). For the honour of India: A history of India – peacekeeping.
- United Nations. (1988). United Nations peacekeeping forces.
- United Nations. (n.d.). UN peacekeeping. Retrieved from https://peacekeeping.un.org/en